ಒ ಎಸ್ ಸಂಖ್ಯೆ: 4/2025 ಪಿಡಬ್ಲ್ಯೂ: -3

ಸಾಕ್ಷಿಯನ್ನು ದಿಃ 26.03.2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು- ಪ್ರತಿವಾದಿ ಪರ ಶ್ರೀ ಎ ಎಂ ಅರ್ ವಕೀಲರಿಂದಃ-**

ನಾನು ದಾವಾ ಸ್ವತ್ತುಗಳನ್ನು ನೋಡಿರುತ್ತೇನೆ. ಮೃತ ಮುನಿಯಪ್ಪ ಮತ್ತು ಪ್ರತಿವಾದಿ ಇಬ್ಬರು ಸದರಿ ದಾವಾ ಜಮೀನನ್ನು ಒಟ್ಟಿಗೆ ಉಳುವೆ ಮಾಡುತ್ತಿದ್ದು ದಾವಾ ಸ್ವತ್ತಿನ ಮನೆಯಲ್ಲಿ ಒಟ್ಟಿಗೆ ವಾಸವಾಗಿದ್ದರು ಎಂದರೆ ಸರಿ. ದಾವಾ ಸ್ವತ್ತು ಪಿತ್ರಾರ್ಜಿತ ವಾಗಿ ಬಂದ ಸ್ವತ್ತು ಎಂದರೆ ಸರಿ. ಮುನಿಯಪ್ಪ ಮರಣ ಹೊಂದುವುದಕ್ಕಿಂತ ಮುಂಚೆ 2-3 ವರ್ಷಗಳಿಂದ ಖಾಯಿಲೆಯಿಂದ ಬಳಲುತ್ತಿದ್ದರು. ವಾದಿ ನವೀನಮ್ಮ ನಮ್ಮ ಊರಿನ ನಿವಾಸಿ ಎಂದರೆ ಸರಿ. ನಾನು ಆಕೆಯನ್ನು ಚಿಕ್ಕಂದಿನಿಂದ ನಮ್ಮ ಊರಿನಲ್ಲಿ ನೋಡುತ್ತಿದ್ದೇನೆ ಎಂದರೆ ಸರಿ. ಸದರಿ ಮರಣಶಾಸನ ಪತ್ರವನ್ನು ಬರೆದುಕೊಡುವ ದಿನ ವಾದಿ ನವೀನಮ್ಮ ಸಬ್ ರಿಜಿಸ್ಟರ್ ಕಚೇರಿಗೆ ಬಂದಿದ್ದರು. ಅ ದಿನ ನಾವು ಬೆಳಿಗ್ಗೆ 10-30 ಗಂಟೆಗೆ ಬಂಗಾರಪೇಟೆ ತಾಲ್ಲೂಕು ಕಚೇರಿ ಬಳಿ ಹೋಗಿರುತ್ತೇವೆ. ನಾನು ಹೋದ ನಂತರ ನನ್ನ ಸಮಕ್ಷಮ ಸದರಿ ವಿಲ್ ನ್ನು ತಯಾರಿಸಲಾಯಿತು. ನನ್ನ ಜೊತೆಯಲ್ಲಿ ಪ್ರಾಸಾ-2 ಗೋಪಾಲಪ್ಪ ಸಹ ಬಂದಿದ್ದರು. ನವೀನಮ್ಮ ಮತ್ತು ಮುನಿಯಪ್ಪ ಇಬ್ಬರು ಸೇರಿ ವಿಲ್ ನ್ನು ಬರೆಯಿಸಿದ್ದರು. ಮೃತ ಮುನಿಯಪ್ಪನಿಗೆ ಮರಣ ಶಾಸನ ಪತ್ರವನ್ನು ಬರೆದುಕೊಡುವ ಹಕ್ಕು ಮತ್ತು ಅಧಿಕಾರ ಹಾಗೂ ಯಾವುದೇ ಉದ್ದೇಶ ಇರಲಿಲ್ಲ ಎಂದರೆ ಸರಿಯಲ್ಲ. ಮೃತ ಮುನಿಯಪ್ಪನಿಗೆ ವಯಸ್ಸಾಗಿದ್ದನ್ನು ದುರುಪಯೋಗ ಪಡಿಸಿಕೊಂಡು ನಾನು, ವಾದಿ, ಮತ್ತು ಪ್ರಾಸಾ-2 ಗೋಪಾಲಪ್ಪ ಎಲ್ಲರೂ ಶಾಮಿಲಾಗಿ ಸದರಿ ಮರಣ ಶಾಸನ ಪತ್ರವನ್ನು ಸುಳ್ಳು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**ಸಾಕ್ಷಿಯ ಹೇಳಿಕೆಯ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ,

Sd/-

**(ಶಿವಕುಮಾರ.ಬಿ )**

3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಕೋಲಾರ ಕೆ.ಜಿ.ಎಫ್(ಪೀಠ)

ಒ ಎಸ್ ಸಂಖ್ಯೆ: **4/2025** ಪಿಡಬ್ಲ್ಯೂ: **-2**

ಸಾಕ್ಷಿಯನ್ನು ದಿಃ **26.03.2026** ರಂದು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು- ಪ್ರತಿವಾದಿ ಪರ ಶ್ರೀ ಎ ಎಂ ಅರ್ ವಕೀಲರಿಂದಃ-**

ನನ್ನ ತಂದೆ ವೆಂಕಟೇಶಪ್ಪ ಮತ್ತು ಪ್ರತಿವಾದಿಯ ತಂದೆ ಮುನಿಯಪ್ಪ ಇಬ್ಬರು ಅಣ್ಣ-ತಮ್ಮಂದಿರು ಎಂದರೆ ಸರಿ. ಸದರಿ ಮುನಿಯಪ್ಪ ತೀರಿಕೊಂಡು ಸುಮಾರು 15 ವರ್ಷಗಳಾಗಿರುತ್ತದೆ. ಮುನಿಯಪ್ಪ ಮರಣ ಹೊಂದುವವರೆಗೆ ಪ್ರತಿವಾದಿಯ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ದಾವಾ ಸ್ವತ್ತು ಮುನಿಯಪ್ಪನ ತಂದೆ ನಲ್ಲನಬೋವಿ ರವರಿಂದ ಬಂದ ಪಿತ್ರಾರ್ಜಿತ ಸ್ವತ್ತು ಅಗಿರುತ್ತದೆ ಎಂದರೆ ಸರಿ. ಸದರಿ ಜಮೀನು ಮಳೆಯಾಶ್ರಿತ ಭೂಮಿಯಾಗಿದ್ದು ಮುನಿಯಪ್ಪ ಮತ್ತು ಪ್ರತಿವಾದಿ ಇಬ್ಬರೂ ಅದರಲ್ಲಿ ಬೆಳೆ ಬೆಳೆಯುತ್ತಿದ್ದರು ಎಂದರೆ ಸರಿ. ವಾದಿ ನವೀನಮ್ಮ ಪ್ರತಿವಾದಿ ಸುರೇಶ ರವರ ಹೆಂಡತಿ ಎಂದರೆ ಸರಿ. ವಾದಿ ನವೀನಮ್ಮ ಪ್ರತಿವಾದಿಯ ಅಕ್ಕನ ಮಗಳು ಎಂದರೆ ಸರಿ.

ಅ ದಿನ ಬೆಳಿಗ್ಗೆ 10-00 ಗಂಟೆಗೆ ನಾನು ಬಂಗಾರಪೇಟೆ ತಾಲ್ಲೂಕು ಕಚೇರಿ ಬಳಿ ಹೋಗಿದ್ದೆನು. ವಾದಿ ನವೀನಮ್ಮ ಸಹ ಅಲ್ಲಿಗೆ ಬಂದಿದ್ದರು. ವಾದಿಯು ನನ್ನನ್ನು ಮತ್ತು ಫ್ರಾಸಾ-3 ರವರನ್ನು ತನ್ನ ಜೊತೆಯಲ್ಲಿ ತಾಲ್ಲೂಕು ಕಚೇರಿಗೆ ಕರೆದುಕೊಂಡು ಹೋದರು. ಅ ಸಮಯದಲ್ಲಿ ಮೃತ ಮುನಿಯಪ್ಪ ನಿಗೆ ವಯಸ್ಸಾಗಿದ್ದು ಸರಿಯಾಗಿ ಕಿವಿ ಕೇಳಿಸುತ್ತಿರಲಿಲ್ಲ ಎಂದರೆ ಸರಿ. ಮುನಿಯಪ್ಪ ಹೆಬ್ಬೆಟ್ಟಿನ ಸಹಿ ಮಾಡುತ್ತಿದ್ದು ವಿದ್ಯಾಭ್ಯಾಸ ಮಾಡಿರಲಿಲ್ಲ. ವಾದಿ ನವೀನಮ್ಮ ಬೆರಳಚ್ಚುಗಾರರಿಗೆ ಜಮೀನಿನ ಸರ್ವೆ ನಂಬರ್ ಮತ್ತು ಇತರೆ ವಿಷಯಗಳ ಬಗ್ಗೆ ಮಾಹಿತಿ ನೀಡಿದ್ದರು ಎಂದರೆ ಸರಿಯಲ್ಲ. ಬೆಳಿಗ್ಗೆ 11-00 ಗಂಟೆಗೆ ನಾನು ಸಬ್ ರಿಜಿಸ್ಟ್ರಾರ್ ಕಚೇರಿಗೆ ಹೋಗಿ ಸಹಿ ಮಾಡಿರುತ್ತೇನೆ. ನಾನು ಸ್ಥಳಕ್ಕೆ ಹೋಗುವಷ್ಟರಲ್ಲಿ ಮೃತ ಮುನಿಯಪ್ಪ ಮತ್ತು ಪತ್ರಬರಹಗಾರರು ರವರು ಮರಣಶಾಸನ ಪತ್ರಕ್ಕೆ ಸಹಿ ಮಾಡಿದ್ದರು. ನಾನು ಮತ್ತು ಫ್ರಾಸಾ-3 ರವರು ಮಾತ್ರ ಸದರಿ ಮರಣ ಶಾಸನ ಪತ್ರಕ್ಕೆ ಸಹಿ ಮಾಡಿರುತ್ತೇವೆ. ವಮುನಿಯಪ್ಪನಿಗೆ ಮರಣಶಾಸನ ಪತ್ರ ಬರೆದುಕೊಡುವ ಹಕ್ಕು ಮತ್ತು ಉದ್ದೇಶ ಇರಲಿಲ್ಲ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ, ಸಾಕ್ಷಿಯಾಗಿ ಸಹಿ ಮಾಡಲು ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ ಎಂದು. ಮೃತ ಮುನಿಯಪ್ಪನಿಗೆ ವಯಸ್ಸಾಗಿದ್ದು ಸರಿಯಾಗಿ ಕಿವಿ ಕೇಳಿಸುತ್ತಿರಲಿಲ್ಲ ವಾದ್ದರಿಂದ ಅತನನ್ನು ವಾದಿ ನಾನು ಮತ್ತು ಫ್ರಾಸಾ-3 ರವರು ಶಾಮಿಲಾಗಿ ಸಬ್ ರಿಜಿಸ್ಟ್ರಾರ್ ಕಚೇರಿಗೆ ಕರೆದುಕೊಂಡು ಸದರಿ ಮರಣಶಾಸನ ಪತ್ರವನ್ನು ಸುಳ್ಳು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.



**ಮರು ವಿಚಾರಣೆಃ ಇರುವುದಿಲ್ಲ.**

**ಸಾಕ್ಷಿಯ ಹೇಳಿಕೆಯ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ,

Sd/-

**(ಶಿವಕುಮಾರ.ಬಿ )**

3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಕೋಲಾರ ಕೆ.ಜಿ.ಎಫ್(ಪೀಠ)